For more job news visit : www.kpscvaani.com

# ಜಿಲ್ಲಾ ಕ್ಷಯರೋಗ ನಿಯಂತ್ರಣಾಧಿಕಾರಿಗಳ ಕಛೇರಿ.

ಎಂ. ವಡಗಾವಿ, ಬೆಳಗಾವಿ – 590005. ದೂರವಾಣಿ ಸಂ. 0831-2407243. ಇಮೇಲ್: DTOKABEL@rntcp.org

ಸಂ: ಜಿಕ್ಷನಿಕೇ/ಜೆ/103/2025-26 ದಿನಾಂಕ: 02/09/2025

## ನೇಮಕಾತಿ ಪ್ರಕಟಣೆ

ಪ್ರಧಾನ ಮಂತ್ರಿ ಜನ ಜಾತಿ ಆದಿವಾಸಿ ನ್ಯಾಯ ಮಹಾ ಅಭಿಯಾನ (PM-JANMAN) ದರ್ತಿ ಅಭಾ-ಜನ ಜಾತಿಯ ಗ್ರಾಮ ಉತ್ಕರ್ಷ ಅಭಿಯಾನ (DA-JGUA) ಯೋಜನೆಯ ವ್ಯಾಪ್ತಿಯ ಮತ್ತು ದುರ್ಗಮ ಹಾಗೂ ಸಂಪರ್ಕರಹಿತ ಪ್ರದೇಶಗಳಲ್ಲಿ ಪ್ರಾಥಮಿಕ ಆರೋಗ್ಯ ಸೇವೆಗಳನ್ನು ನೀಡಲು ಸಂಚಾರಿ ಆರೋಗ್ಯ ಘಟಕಗಳನ್ನು (ಎಂ.ಹೆಚ್.ಯು) ಅನುಷ್ಠಾನಗೊಳಿಸಲು ಮಾನವ ಸಂಪನ್ಮೂಲ ಆಯ್ಕೆ ಮಾಡಲು ಈ ಕೆಳಗಿನ ಹುದ್ದೆಗಳಿಗೆ ಸೆಪ್ಟೆಂಬರ್ 2025 ರಿಂದ ಮಾರ್ಚ್ 2026 ವರೆಗೆ 7 ತಿಂಗಳು ನೇರ ಗುತ್ತಿಗೆ ಆಧಾರದ ಮೇರೆಗೆ (ಹಾಗೂ ಸದರಿ ಗುತ್ತಿಗೆ ಅವಧಿಯು ಸರ್ಕಾರದ ಮಾರ್ಗಸೂಚಿ ಪರಿಶೀಲಿಸಿ ಅನುಮೋದನೆ ನೀಡಿದ ನಂತರ ಗುತ್ತಿಗೆ ಸೇವೆಯನ್ನು 2026-27 ನೇ ಸಾಲಿಗೆ ಮುಂದುವರಿಸಬಹುದಾಗಿದೆ) ಕಾರ್ಯಕ್ರಮದಡಿಯಲ್ಲಿ ಕಾರ್ಯನಿರ್ವಹಿಸಲು ಅರ್ಹ ಅಭ್ಯರ್ಥಿಗಳಿಂದ ರೋಷ್ಟರ್ / ಮೇರಿಟ್ ಆಧಾರದ ಮೇಲೆ ನೇಮಕಾತಿ ನಿಯಮಾವಳಿಗಳನ್ವಯ ಅರ್ಜಿ ಆಹ್ವಾನಿಸಲಾಗಿದೆ.

| ಕ್ರ ಸಂ. | ಹುದ್ದೆ | ಒಟ್ಟು ಹುದ್ದೆಗಳು ಮತ್ತು ಮೀಸಲಾತಿ | ವಿದ್ಯಾರ್ಹತೆ | ಅನುಭವದ ವಿವರ ಮತ್ತು ವಯೋಮಿತಿ | ಮಾಸಿಕ ವೇತನ |
|---|---|---|---|---|---|
| 1 | ಎಂ.ಬಿ.ಬಿ.ಎಸ್. ವೈದ್ಯಾಧಿಕಾರಿಗಳು | (4) ಹುದ್ದೆಗಳು<br>ಸಾ.ಅ. - 2<br>ಪ.ಜಾ. - 1<br>ಪ.ಪಂ. - 1 | • ಎಂ.ಬಿಬಿಎಸ್. ಉತ್ತೀರ್ಣರಾಗಿರಬೇಕು ಹಾಗೂ ಕಡ್ಡಾಯವಾಗಿ Internship ಪೂರ್ತಿಸಿರಬೇಕು<br>• ಕೆ.ಎಂ.ಸಿ.ಯ ನೊಂದಣಿ ಹೊಂದಿರತಕ್ಕದ್ದು.<br>• ಸಂಬಂಧ ಪಟ್ಟ ವಿಶ್ವ ವಿದ್ಯಾಲಯದಿಂದ Convocation / Degree Certificate ಹೊಂದಿರಬೇಕು. | **ಅನುಭವ:** ಕನಿಷ್ಠ ಎರಡು ವರ್ಷಗಳ ಸೇವೆ ಸಲ್ಲಿಸಿರುವ ಅನುಭವವನ್ನು ಹೊಂದಿರಬೇಕು.<br>**ವಯೋಮಿತಿ:** ಗರಿಷ್ಠ 65 ವರ್ಷ | ರೂ. 75000/- |
| 2 | ಶುಶ್ರೂಷಕರು | (4) ಹುದ್ದೆಗಳು<br>ಸಾ.ಅ. - 2<br>ಪ.ಜಾ. - 1<br>ಪ.ಪಂ. - 1 | • ಜಿ.ಎನ್.ಎಂ. ನರ್ಸಿಂಗ್ / ಬಿ.ಎಸ್.ಸಿ. ನರ್ಸಿಂಗ್<br>• ಕರ್ನಾಟಕ ನರ್ಸಿಂಗ್ ಕೌನ್ಸಿಲಿಂಗ್‌ನಲ್ಲಿ ನೊಂದಣಿಯಾಗಿರಬೇಕು. | **ಅನುಭವ:** ಕನಿಷ್ಠ ಎರಡು ವರ್ಷಗಳ ಸೇವೆ ಸಲ್ಲಿಸಿರುವ ಅನುಭವವನ್ನು ಹೊಂದಿರಬೇಕು.<br>**ವಯೋಮಿತಿ:** ಗರಿಷ್ಠ 45 ವರ್ಷ | ರೂ. 22000/- |
| 3 | ಪ್ರಯೋಗಶಾಲಾ ತಂತ್ರಜ್ಞರು | (4) ಹುದ್ದೆಗಳು<br>ಸಾ.ಅ. - 2<br>ಪ.ಜಾ. - 1<br>ಪ.ಪಂ. - 1 | • ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆಯನ್ನು ಹೊಂದಿರಬೇಕು ಮತ್ತು ಕರ್ನಾಟಕ ರಾಜ್ಯ ಅರೆ ವೈದ್ಯಕೀಯ ಮಂಡಳಿಯ ನಡೆಸುವ ಪ್ರಯೋಗಶಾಲಾ ತಂತ್ರಜ್ಞತೆಯಲ್ಲಿ ಮೂರು ವರ್ಷದ ಡಿಪ್ಲೋಮಾ ಹೊಂದಿರಬೇಕು.<br>**ಅಥವಾ**<br>• ದ್ವಿತೀಯ ಪಿಯುಸಿಯಲ್ಲಿ ವಿಜ್ಞಾನ ವಿಷಯದಲ್ಲಿ ಉತ್ತೀರ್ಣ ಮತ್ತು ಕರ್ನಾಟಕ ರಾಜ್ಯ ಅರೆ ವೈದ್ಯಕೀಯ ಮಂಡಳಿಯು ನಡೆಸುವ ಪ್ರಯೋಗಶಾಲಾ ತಂತ್ರಜ್ಞತೆಯಲ್ಲಿ ಎರಡು ವರ್ಷದ ಡಿಪ್ಲೋಮಾ ಹೊಂದಿರಬೇಕು.<br>• ಪ್ರಯೋಗಶಾಲಾ ತಂತ್ರಜ್ಞರು ಕಡ್ಡಾಯವಾಗಿ ಕರ್ನಾಟಕ ರಾಜ್ಯ ಅರೆ ವೈದ್ಯಕೀಯ ಮಂಡಳಿಯ ನೊಂದಣಿ ಹೊಂದಿರಬೇಕು. | **ಅನುಭವ:** ಕನಿಷ್ಠ ಎರಡು ವರ್ಷಗಳ ಸೇವೆ ಸಲ್ಲಿಸಿರುವ ಅನುಭವವನ್ನು ಹೊಂದಿರಬೇಕು.<br>**ವಯೋಮಿತಿ:** ಗರಿಷ್ಠ 45 ವರ್ಷ | ರೂ. 20000/- |

ಹೆಚ್ಚಿನ ಮಾಹಿತಿಗಾಗಿ ಹಾಗೂ ಅರ್ಜಿ ನಮೂನೆಗಾಗಿ ಸದಸ್ಯ ಕಾರ್ಯದರ್ಶಿಗಳು, ಜಿಲ್ಲಾ ಕ್ಷಯರೋಗ ನಿಯಂತ್ರಣಾಧಿಕಾರಿಗಳು, ಜಿಲ್ಲಾ ಕ್ಷಯರೋಗ ನಿಯಂತ್ರಣ ಕೇಂದ್ರ, ಎಂ. ವಡಗಾವಿ ಬೆಳಗಾವಿ ಇವರನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸುವುದು.

**ವಿಶೇಷ ಸೂಚನೆ:** ಸದರಿ ನೇಮಕಾತಿ ಪ್ರಕ್ರಿಯೆಯು ಜಿಲ್ಲಾ ಆರೋಗ್ಯ & ಕು. ಕ. ಸಂಘದ ಆದೇಶಕ್ಕೆ ಅನುಗುಣವಾಗಿ ಮುಂದಿನ ಮಾರ್ಪಾಡುಗಳಿಗೆ ಒಳಪಟ್ಟಿರುತ್ತದೆ.

**ನೇಮಕಾತಿ ವೇಳಾಪಟ್ಟಿ**

1) ಅರ್ಜಿ ವಿತರಿಸುವ ದಿನಾಂಕ: 03/09/2025 ರಿಂದ 09/09/2025. 2) ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ: 10/09/2025

ಅರ್ಜಿ ಸಲ್ಲಿಸುವ ವಿಳಾಸ: ಜಿಲ್ಲಾ ಕ್ಷಯರೋಗ ನಿಯಂತ್ರಣ ಅಧಿಕಾರಿಗಳು, ಜಿಲ್ಲಾ ಕ್ಷಯರೋಗ ನಿಯಂತ್ರಣ ಕೇಂದ್ರ, ಎಂ-ವಡಗಾವಿ ಬೆಳಗಾವಿ - 590005.

(ಕರಡು ಪ್ರತಿ ಮಾನ್ಯ ಅಧ್ಯಕ್ಷರು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿ.ಪಂ. ಬೆಳಗಾವಿ ಇವರಿಂದ ಅನುಮೋದಿಸಲ್ಪಟ್ಟಿದೆ).

ಸಹಿ/- ಸದಸ್ಯ ಕಾರ್ಯದರ್ಶಿಗಳು
ಜಿಲ್ಲಾ ಕ್ಷಯರೋಗ ನಿಯಂತ್ರಣಾಧಿಕಾರಿಗಳು ಬೆಳಗಾವಿ

[illegible]/2025-26